**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ, ಧಾರವಾಡ**

**ಸಿಸಿ ನಂ.1779/2024**

ಪಿರ್ಯಾದುದಾರರುಃ ಪಿ ಎಸ್ ಐ , ಗ್ರಾಮೀಣ ಪೋಲಿಸ ಠಾಣೆ, ಧಾರವಾಡ.

**ವಿರುದ್ಧ**

ಆರೋಪಿತರುಃ ಪ್ರಕಾಶ ರಾಮಚಂದ್ರ ಕಡ್ಡಿ

ವಯಾಃ 54 ವರ್ಷ

ಸಾಃ ಗೋಪನಕೊಪ್ಪ , ಧಾರವಾಡ

**–ಃ ಆಪಾದನೆ ಃ–**

ದಿಃ 29.03.2024 ರಂದು 20.45 ಗಂಟೆಯ ಸುಮಾರಿಗೆ ಧಾರವಾಡ ಗ್ರಾಮೀಣ ಪೋಲೀಸ ಠಾಣೆ ಸರ ಹದ್ದಿಯ ಧಾರವಾಡ ಹಳಿಯಾಳ ರಸ್ತೆಯ ಮೇಲೆ ಮಾವಿನಕೊಪ್ಪ ಹತ್ತಿರ ಆರೋಪಿಯಾದ ನೀವು ನಿಮ್ಮ ಬಾಬ್ತು ಕಾರ ನಂ.ಕೆಎ.01/ಎಂ.ಆರ್–0098 ನೇದ್ದನ್ನು ಹಳಿಯಾಳ ಕಡೆಯಿಂದ ಧಾರವಾಡ ಕಡೆಗೆ ಅತೀ ವೇಗ ಹಾಗೂ ನಿಕ್ಷಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಕಾರಿನ ನಿಯಂತ್ರಣ ಕಳೆದುಕೊಂಡು ರಸ್ತೆಯ ಬದಿಯಲ್ಲಿ ಇದ್ದ ಮರಕ್ಕೆ ಡಿಕ್ಕಿ ಮಾಡಿ ಅಪಘಾತಮಾಡಿದ್ದು **ಭಾರತೀಯ ದಂಡ ಸಂಹಿತೆ ಕಲಂ.279** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಎರಡನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ನಿಮ್ಮ ಕಾರಿನಲ್ಲಿದ್ದ ಚಾಸಾ6 ಶ್ರೀನಿವಾಸ ಭಜಂತ್ರಿ ಇವರಿಗೆ ಸಾದಾ ಸ್ವರೂಪದ ಗಾಯ ಪಡುವಂತೆ ಮಾಡಿದ್ದು, **ಭಾರತೀಯ ದಂಡ ಸಂಹಿತೆ ಕಲಂ.337** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ

ಮೂರನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ನಿಮ್ಮ ಕಾರನಲ್ಲಿದ್ದ ಚಾಸಾ7 ರವೀಂದ್ರ ದೊಡಮನಿ ಇವರಿಗೆ ಭಾರಿ ಸ್ವರೂಪದ ಗಾಯ ಪಡುವಂತೆ ಮಾಡಿದ್ದು,

**ಭಾರತೀಯ ದಂಡ ಸಂಹಿತೆ ಕಲಂ.338** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ

ನಾಲ್ಕನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ನಿಮ್ಮ ಕಾರನಲ್ಲಿದ್ದ ಕ್ಷೀರಾನಂದ ಮಲ್ಲಪ ಇವರಿಗೆ ರಕ್ತ ಗಾಯಪಡಿಸಿ ಮೃತ ಪಡುವಂತೆ ಮಾಡಿದ್ದು, **ಭಾರತೀಯ ದಂಡ ಸಂಹಿತೆ ಕಲಂ.304 ಎ** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ

ಕೊನೇಯದಾಗಿ , ಮೇಲೆ ಹೇಳಿದ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮದ್ಯಪಾನ ಮಾಡಿ ವಾಹನ ಚಲಾಯಿಸಿ ಅಪಘಾತಪಡಿಸಿದ್ದು, **ಮೋಟಾರು ವಾಹನ ಕಾಯ್ದೆ ಕಲಂ.185** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ

ಪ್ರಶ್ನೇಃ- ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರಃ

( **ಸದರಿ ಆಪಾದನೆಯನ್ನು ಆರೋಪಿಗೆ ಓದಿ ತಿಳಿಸಿ, ಅವರು ಕೊಟ್ಟ ಸಂಪೂರ್ಣ ಹಾಗೂ ಸರಿಯಾದ ಉತ್ತರವನ್ನು ಅಭಿಲೇಖಿಸಿಕೊಳ್ಳಲಾಗಿದೆ.**)

ದಿನಾಂಕ 09.06.2025.

ಧಾರವಾಡ.

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಧಾರವಾಡ